# ಉಬ್ಬಿದ ರಕ್ತನಾಳಗಳು



**ಡಾ|| ಶ್ರೀಕಾಂತ್ ಮೋರ್ಲಾವರ್**

**ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್**

ಇಲ್ಲಿ ದೇಹದ ರಕ್ತನಾಳಗಳು ಹಿಗ್ಗಿ ದೊಡ್ಡದಾಗುತ್ತವೆ ಮತ್ತು ಹೆಚ್ಚಿನ ಪ್ರಮಾಣದ ರಕ್ತ ಇದರಲ್ಲಿ ತುಂಬಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು. ಈ ಸ್ಥಳದಲ್ಲಿ ಚರ್ಮ ಉಬ್ಬಿದ ಹಾಗೆ ಕಾಣಿಸುವುದು ಹೀಗೆ ಉಬ್ಬಿರುವ ರಕ್ತನಾಳಗಳನ್ನು ವೆರಿಕೋಸ್ ವೇನ್ಸ್ ಎನ್ನುತ್ತಾರೆ. ಇದು ಸಾಮಾನ್ಯವಾಗಿ ನೀಲಿ ಅಥವಾ ನೇರಳೆ ಬಣ್ಣದಲ್ಲಿರುತ್ತದೆ ಹಾಗೂ ಚರ್ಮ ಉಬ್ಬಿದ ರೀತಿಯಲ್ಲಿಯೂ ಕಾಣಿಸಿಕೊಳ್ಳಬಹುದು. ಇದು ಸಾಮಾನ್ಯವಾಗಿ ಕಾಲಿನ ತೊಡೆಯ ಭಾಗ ಕಾಫ್ ರೀಜನ್ ಹಾಗೂ ಪಾದದಲ್ಲಿ ಕಾಣಿಸಿಕೊಳ್ಳುತ್ತದೆ, ಹಾಗೂ ಇದು ನಿಧಾನವಾಗಿ ಹೆಚ್ಚಿನ ಬದಲಾವಣೆಗಳಿಗೆ ಕಾರಣವಾಗಬಹುದು.

**ಕಾರಣಗಳು:**

- ಕಾಲಿನ ರಕ್ತನಾಳಗಳಲ್ಲಿ ದೋಷಗಳಿದ್ದಾಗ ಹಾಗೂ ಅದರ ಸಾಮರ್ಥ್ಯ ಕಡಿಮೆಯಾದಾಗ ಅದು ಕೆಲಸ ಮಾಡುವಲ್ಲಿ ವಿಫಲವಾಗುತ್ತದೆ.ಇದರಿಂದಾಗಿ ರಕ್ತವು ಕಾಲಿನ ಭಾಗದಲ್ಲಿ ಸಂಗ್ರಹಿಸಲ್ಪಡುತ್ತದೆ ಇದರ ಪರಿಣಾಮವಾಗಿ ವೆರಿಕೋಸ್ ವೇನ್ಸ್ ಕಾಣಿಸಿಕೊಳ್ಳುತ್ತದೆ.
- ವಯಸ್ಸು ಹೆಚ್ಚಾದಂತೆ ಈ ಬಗೆಯ ಬದಲಾವಣೆಗಳು ಹೆಚ್ಚಾಗುವುದು.
- ಅನುವಂಶಿಕ ಕಾರಣಗಳು.
- ಬೊಜ್ಜು ರಕ್ತನಾಳಗಳ ಮೇಲೆ ಒತ್ತಡ ಹೆಚ್ಚಾಗುವುದು
- ವ್ಯಾಯಾಮದ ಕೊರತೆ,ಕೂತಲ್ಲಿಯೇ ಕೂತಿರುವುದು
- ಅಧಿಕ ಸಮಯದವರೆಗೆ ನಿಂತಿರುವುದು.
- ಗರ್ಭಿಣಿಯರಲ್ಲಿ, ಗೃಹಿಣಿಯರಲ್ಲಿ.

**ರೋಗ ಲಕ್ಷಣಗಳು:**

- ರಕ್ತನಾಳಗಳು ನೀಲಿ ಬಣ್ಣದಲ್ಲಿ ಕಾಣಿಸಿಕೊಳ್ಳುವುದು ಅಥವಾ ರಕ್ತನಾಳಗಳು ಉಬ್ಬಿರುವ ರೀತಿಯಲ್ಲಿ ಗೋಚರಿಸುವುದು.
- ತಿಳಿ ನೇರಳೆ ಜೇಡರ ಬಲೆಯ ರೀತಿಯಲ್ಲಿ ರಕ್ತನಾಳಗಳು ತೊಡೆಯ ಭಾಗದಲ್ಲಿ ಕಾಣಿಸಿಕೊಳ್ಳುವುದು.
- ಕಾಲು ಭಾರವಾದಂತೆ ಅನಿಸುವುದು.
- ನಡೆಯುತ್ತಿದ್ದಂತೆ ಕಾಲಿನಲ್ಲಿ ಸೆಳೆತ, ಭಾರವಾಗುವಿಕೆ.
- ಪಾದ ಹಾಗೂ ಕಾಲಿನಲ್ಲಿ ಊತ.
- ನವೆಯಾಗುವುದು.
- ಚರ್ಮದ ಬಣ್ಣ ಬದಲಾಗುವುದು, ಹಾಗೆಯೇ ಕಪ್ಪಾಗುವುದು. ಸಮಸ್ಯೆಯು ಹೆಚ್ಚಾದಂತೆಲ್ಲಾ ಬಣ್ಣ ಹೆಚ್ಚು ಹೆಚ್ಚಾಗಿ ಕಪ್ಪಾಗುವುದು.
- ಸಣ್ಣ ಗಾಯಗಳಿಂದ ಅಧಿಕ ರಕ್ತ ಸೋರುವಿಕೆ, ಗಾಯ ವಾಸಿಯಾಗಲು ನಿಧಾನವಾಗುವಿಕೆ ಇತ್ಯಾದಿ.
- ಕಾಲಿನಲ್ಲಿ ನೋವು ಸೆಳೆತ ಬಿಗಿಯಾಗುವಿಕೆ.
- ಸ್ನಾಯು ಸೆಳೆತ ಹಾಗೂ ಸುಸ್ತಾಗುವುದು.
- ರಕ್ತ ಹೆಪ್ಪುಗಟ್ಟಿದ ಬದಲಾವಣೆಗಳು ಕೆಲವೊಂದು ಭಾರಿ ಗಮನಿಸಬಹುದಾಗಿದೆ.

**ಪತ್ತೆ ಹಚ್ಚುವ ವಿಧಾನಗಳು.**

- ಸರಿಯಾದ ವಿವರವಾದ ಬದಲಾವಣೆಗಳ ಬಗೆಗಿನ ಮಾಹಿತಿ. ಡಾಪ್ಲರ್ ಸ್ಟಡಿ ಬಹು ಉಪಯುಕ್ತವಾಗಿದೆ.ಇದರ ಸಹಾಯದಿಂದ ರಕ್ತನಾಳದಲ್ಲಿ ರಕ್ತದ ಹರಿಯುವಿಕೆಯನ್ನು ಗುರುತಿಸುವ ಮಾಹಿತಿ

ಹೋಮಿಯೋಕೇರ್® ಇಂಟರ್‌ನ್ಯಾಷನಲ್

ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಯನ್ನು ಪಡೆದುಕೊಳ್ಳಬಹುದಾಗಿದೆ.

- ಹಿಂದಿನ ರೋಗ ಹಾಗೂ ಅನುವಂಶೀಯ ಕಾರಣಗಳ ಬಗೆಗಿನ ಮಾಹಿತಿಯು ಕೂಡ ಉಪಯುಕ್ತವಾಗಿರುತ್ತದೆ.

**ಸಮಸ್ಯೆಗಳು / ಪರಿಣಾಮಗಳು.**

- ಪಿಗ್ಮೆಂಟೇಷನ್ ಉಂಟಾಗುವುದು.
- ಧೀರ್ಘಕಾಲದ ಚರ್ಮದ ತೊಂದರೆಗಳಿಗೆ ಒಳಗಾಗುವುದು.
- ರಕ್ತನಾಳದ ಹುಣ್ಣುಗಳು
- ಡಿ ವಿ ಟಿ.
- ಪಾದದ ಊತ ಹಾಗೂ ಗಾಯಗಳು ಒಣಗದಿರುವುದು.
- ಗಾಯಗಳಲ್ಲಿ ನಿರಂತರವಾಗಿ ರಕ್ತ ಒಸರವುದು.

**ಮುನ್ನೆಚ್ಚರಿಕೆಯ/ಮುಂಜಾಗ್ರತಾ ಕ್ರಮಗಳು :**

- ಕುಳಿತುಕೊಂಡಿರುವಾಗ ಹಾಗೂ ಮಲಗಿರುವಾಗ ಕಾಲುಗಳನ್ನು ಉದ್ದಕ್ಕೆ ಚಾಚಿಕೊಳ್ಳುವುದು.
- ಕಂಪ್ರೆಶನ್ ಡ್ರೆಸ್ಸಿಂಗ್ ಮಾಡಿಸಿಕೊಳ್ಳುವುದು.
- ಸ್ಟಾಕಿಂಗ್ ಗಳ ಉಪಯೋಗ.
- ಅಧಿಕ ದೇಹದ ತೂಕವನ್ನು ನಿಯಂತ್ರಿಸಿಕೊಳ್ಳುವುದು.
- ದಿನನಿತ್ಯ ವ್ಯಾಯಾಮ ಮಾಡುವುದು.
- ಸಡಿಲವಾದ ಉಡುಪು ಧರಿಸುವುದು
- ಹೆಚ್ಚು ಹೊತ್ತು ನಿಂತುಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳುವುದು
- ಪೋಷಕಾಂಶಯುಕ್ತವಾದ ಆಹಾರದ ಸೇವನೆ.
- ಮಾನಸಿಕ ಒತ್ತಡಗಳಿಂದ ದೂರವಿರುವುದು
- ಮದ್ಯಪಾನ ಹಾಗೂ ಧೂಮಪಾನ ಮಾಡದಿರುವುದು.
- ಯಾವುದೇ ಬದಲಾವಣೆಗಳು ಕಂಡು ಬಂದಲ್ಲಿ ವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದು.

**ಹೋಮಿಯೋಕೇರ್ ಇಂಟರ್ ನ್ಯಾಷನಲ್ ಚಿಕಿತ್ಸೆ.**

ಹೋಮಿಯೋಕೇರ್ ಇಂಟರ್ ನ್ಯಾಷನಲ್‌ನಲ್ಲಿನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನದಿಂದ ಈ ಸಮಸ್ಯೆಯ ಪರಿಣಾಮಗಳನ್ನು ಸರಿಪಡಿಸಬಹುದಾಗಿದೆ. ಈ ಸಮಸ್ಯೆಯಿಂದಾಗಿ ಉಂಟಾಗುವಂತಹ ನೋವು, ಊತ ಮೊದಲಾದ ತೊಂದರೆಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆ ನೀಡಲಾಗುವುದು. ಇಲ್ಲಿ ರೋಗ ಲಕ್ಷಣ ಮಾತ್ರವಲ್ಲದೆ ರೋಗಿಯ ಮಾನಸಿಕ ಶಾರೀರಿಕ ಬದಲಾವಣೆಗಳು ಹಾಗೂ ಪರಿಸ್ಥಿಯನ್ನು ವಿವರವಾಗಿ ತಿಳಿದುಕೊಂಡು ಚಿಕಿತ್ಸೆ ನೀಡಲಾಗುವುದು. ಇದು ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುವಲ್ಲಿ ಸಹಾಯಕಾರಿಯಾಗಿದೆ. ಚಿಕಿತ್ಸೆ ಹಾಗೂ ಚಿಕಿತ್ಸೆಯ ಅವಧಿಯು ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸವಾಗಿರಬಹುದು ಹಾಗೂ ಫಲತಾಂಶವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ. ಫಲತಾಂಶಗಳು ವ್ಯಕ್ತಿಯ ದೇಹದ ರೋಗ ನಿರೋಧಕ ವ್ಯವಸ್ಥೆ ಹಾಗೂ ಅವರ ಅನಾರೋಗ್ಯದ ತೀವ್ರತೆಯನ್ನು ಅವಲಂಬಿಸುರುತ್ತದೆ.

**ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್**
**ಉಚಿತ ಸಮಾಲೋಚನೆಗಾಗಿ 9550001133**
**Toll Free Num: 18001081212**

**ಶಾಖೆಗಳು:** ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ